ಕರ್ನಾಟಕ ವಿಧಾನ ಸಭೆ

399 ಶ್ರೀ ನೆ.ಲ.ನರೇಂದ್ರಬಾಬು

ಅ) ರಾಜ್ಯದಲ್ಲಿ ಕೃಷಿ ಸಾಲ ಪಡೆದವರ ಸಂಖ್ಯೆ ಎಷ್ಟು? ಇದರ ಪ್ರಯೋಜನವನ್ನು ಯಾವ ಯಾವ ರೈತರು ಎಷ್ಟೆಷ್ಟು ಹಣ ಸಾಲದ ರೂಪದಲ್ಲಿ ಪಡೆದಿದ್ದಾರೆ? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

2007–08ನೇ ಸಾಲಿನಲ್ಲಿ 12,86,791 ರೈತರು ರೂ.3143.81 ಕೋಟಿಗಳ ಕೃಷಿ ಸಾಲ ಪಡೆದಿದ್ದಾರೆ.

2008–09ನೇ ಸಾಲಿನಲ್ಲಿ (ಜನವರಿವರೆಗೆ) 10,40,717 ರೈತರು ರೂ.2657.76 ಕೋಟಿಗಳ ಕೃಷಿ ಸಾಲ ಪಡೆದಿರುತ್ತಾರೆ.

ಜಿಲ್ಲಾವಾರು ಬ್ಯಾಂಕುವಾರು ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ರೈತರ ಆತ್ಮಹತ್ಯೆ ತಡೆಯಲು ಕೃಷಿ ನೀತಿಯಲ್ಲಿ ಅಳವಡಿಸಿಕೊಂಡಿರುವ ರೂಪು–ರೇಷೆಗಳು ಯಾವುವು?

ರೈತರ ಆತ್ಮಹತ್ಯೆ ತಡೆಗಟ್ಟಲು ಕೃಷಿ ಇಲಾಖೆಯಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳು ಕೆಳಗಿನಂತಿವೆ.

1) ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ಹಾಗೂ ಇತರೆ ಪರಿಕರಗಳನ್ನು ವಿತರಿಸುವುದು.
2) ಟ್ರಾಕ್ಟರ್, ಪವರ್ ಟಿಲ್ಲರ್ ಮತ್ತು ಹೈಟೆಕ್ ಕೃಷಿ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ವಿತರಿಸುವುದು.
3) ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ ನೀಡುವುದು.
4) ರಿಯಾಯಿತಿಯಲ್ಲಿ ಹನಿ ನೀರಾವರಿ ಮತ್ತು ತುಂತುರು ನೀರಾವರಿ ಉಪಕರಣಗಳನ್ನು ವಿತರಿಸುವುದು.
5) ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಬಗ್ಗೆ ಪ್ರೋತ್ಸಾಹಿಸುವುದು.
6) ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮಕೈಗೊಳ್ಳುವುದು.
7) ಕೀಟನಾಶಕ, ರೋಗನಾಶಕಗಳು ಹಾಗೂ ಸಿಂಪರಣಾ ಯಂತ್ರಗಳನ್ನು ರಿಯಾಯಿತಿ ದರದಲ್ಲಿ ಒದಗಿಸುವುದು.
8) ಎಣ್ಣೆಕಾಳು, ದ್ವಿದಳ ಧಾನ್ಯ, ಹತ್ತಿ ಬೆಳೆಗಳಿಗೂ ಸಹ ರಿಯಾಯಿತಿ ದರದಲ್ಲಿ ವಿವಿಧ ಸವಲತ್ತುಗಳನ್ನು ಒದಗಿಸುವುದು.

9) ಖುಷ್ಕಿ ಬೇಸಾಯವನ್ನು ಅವಲಂಬಿಸಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಪ್ರತಿ ಕುಟುಂಬಕ್ಕೆ ರೂ.1000.00 ಗಳನ್ನು ವಿತರಿಸುವುದು.

ಇ) ರೈತರಿಂದ ಸಹಕಾರ ಬ್ಯಾಂಕುಗಳು ಸಾಲ ವಸೂಲಾತಿಯನ್ನು ಒತ್ತಾಯಪೂರ್ವಕವಾಗಿ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ತಡೆಯಲು ತೆಗೆದುಕೊಂಡಿರುವ ಕ್ರಮಗಳೇನು?

ಗಮನಕ್ಕೆ ಬಂದಿರುವುದಿಲ್ಲ.

ಈ) ಇಲ್ಲಿಯವರೆಗೆ ಎಷ್ಟು ರೈತರಿಗೆ ಸಾಲ ಮನ್ನಾ ಮಾಡಲಾಗಿದೆ? (ಕ್ಷೇತ್ರವಾರು ವಿವರ ನೀಡುವುದು)

ಇಲ್ಲಿಯವರೆಗೆ 9,86,980 ರೈತರಿಗೆ ಸಾಲ ಮನ್ನಾ ಮಾಡಲಾಗಿದೆ. (ಜಿಲ್ಲಾವಾರು ಬ್ಯಾಂಕುವಾರು ಮಾಹಿತಿಯನ್ನು ಅನುಬಂಧ 2 ರಲ್ಲಿ ಲಗತ್ತಿಸಲಾಗಿದೆ.

ಉ) ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ವಿವಧ ರೈತರ ಸಾಲ ಮನ್ನಾ ಯೋಜನೆ ಅಡಿ ಎಷ್ಟು ಜನರಿಗೆ ಸಹಾಯವಾಗಿದೆ? (ವಿದರ್ಭ ಪ್ಯಾಕೇಜ್ ಅಡಿ 72 ಸಾವಿರ ಸಾಲ ಮನ್ನಾ ಬಗ್ಗೆ)

ವಿದರ್ಭ ಪ್ಯಾಕೇಜ್ ಅಡಿ 1,40,023 ಜನರಿಗೆ ಸಹಾಯವಾಗಿದೆ.

ಊ) ಇಲ್ಲಿಯವರೆಗೆ ಈ ಯೋಜನೆ ಅಡಿಯಲ್ಲಿ ಸರ್ಕಾರ ಎಷ್ಟು ರೈತರಿಗೆ ಸಾಲ ನೀಡಿದೆ? (ಜಾತಿವಾರು ವಿವರ ಒದಗಿಸುವುದು)

ಈ ಯೋಜನೆಯಡಿಯಲ್ಲಿ ಆರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಆರು ಜಿಲ್ಲೆಗಳಲ್ಲಿನ ಸಹಕಾರ ಬ್ಯಾಂಕುಗಳಿಂದ 3,21,008 ರೈತರಿಗೆ ಸಾಲ ನೀಡಲಾಗಿದೆ. ಮಾಹಿತಿಯು ಅನುಬಂಧ 1 ರಲ್ಲಿ ಇರುತ್ತದೆ.

ಸಂಖ್ಯೆ: ಸಿಒ 44 ಸಿಎಲ್‌ಎಸ್2009

ಸಹಿ/-
(ಲಕ್ಷ್ಮಣ ಸ.ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬು ಇವರ ಪ್ರಶ್ನೆ ಸಂಖ್ಯೆ: 399 ರ ಅನುಬಂಧ–1

ಕ್ರ ಸಂ	ಜಿಲ್ಲೆಗಳ ಹೆಸರು	2007–08ನೇ ಸಾಲಿನಲ್ಲಿ		2008–09ನೇ ಸಾಲಿನಲ್ಲಿ	
		ಫಲಾನುಭವಿ	ವಿತರಿಸಿದ ಸಾಲ	ಫಲಾನುಭವಿ	ವಿತರಿಸಿದ ಸಾಲ

		ಗಳ ಸಂಖ್ಯೆ	(ರೂ.ಕೋಟಿಗಳಲ್ಲಿ)	ಗಳ ಸಂಖ್ಯೆ	(ರೂ.ಕೋಟಿಗಳಲ್ಲಿ .)
1.	ಬೆಂಗಳೂರು (ನ), ಬೆಂಗಳೂರು (ಗ್ರಾ) ಹಾಗೂ ರಾಮನಗರ	28,418	90.95	27809	93.2
2.	ಕೋಲಾರ ಹಾಗೂ ಚಿಕ್ಕಬಳ್ಳಾಪುರ	780	9.48	116	4.68
3.	ಚಿತ್ರದುರ್ಗ	17,366	29 38	14,677	27.09
4	ಶಿವಮೊಗ್ಗ	55,685	131.83	49,012	116 01
5.	ದಾವಣಗೆರೆ	47,366	98.12	48,242	95 67
6.	ತುಮಕೂರು	25,002	71 11	26,553	82.52
7.	ಮೈಸೂರು ಹಾಗೂ ಚಾಮರಾಜನಗರ	31,253	122.37	25,070	95.24
8	ಮಂಡ್ಯ	58,079	118.78	33,605	84.53
9.	ಹಾಸನ	49,866	131.13	40,574	120.7
10.	ದಕ್ಷಿಣ ಕನ್ನಡ ಹಾಗೂ ಉಡುಪಿ	63,415	321.7	70,340	367.83
11.	ಕೊಡಗು	19,845	129.59	22,712	160.92
12.	ಚಿಕ್ಕಮಗಳೂರು	17,407	105.44	8,891	60.76
13.	ಬೆಳಗಾವಿ	1,87,509	298 87	1,85,142	284.2
14.	ಬಿಜಾಪುರ	1,22,006	291.78	1,07,054	278.02
15.	ಬಾಗಲಕೋಟೆ	1,28,496	409.89	1,05,992	313.04
16.	ಧಾರವಾಡ, ಗದಗ ಹಾಗೂ ಹಾವೇರಿ	60,428	125.74	28,764	59.54
17.	ಉತ್ತರ ಕನ್ನಡ	62,289	126.72	50,536	104.51
18.	ಗುಲ್ಬರ್ಗಾ	75,366	78.08	94,006	51.06
19.	ಬೀದರ್	1,63,320	260.19	38,960	82.18
20.	ರಾಯಚೂರು ಹಾಗೂ ಕೊಪ್ಪಳ	40,610	109.53	38,294	99.18
21	ಬಳ್ಳಾರಿ	32,285	83 1	24,368	76.87
	ಒಟ್ಟು	12,86,791	3143.81	10,40,717	2657.76

ಸಹಿ/-
(ಲಕ್ಷ್ಮಣ ಸ.ಸವದಿ)
ಸಹಕಾರ ಸಚಿವರು
(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.